ದಿನಾಂಕಃ 04-04-2022 ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಗೆ ಅರ್ಜಿದಾರ ಪರ ಶ್ರೀ ಪಿ.ವಿ.ಕೆ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಈಗ ನೋಡುತ್ತಿರುವ ನಿಪಿ-2 ಮೃತ್ಯು ಪತ್ರವನ್ನು ಚೆನ್ನಮ್ಮ ರವರು ಮಲ್ಲಮ್ಮ ಮತ್ತು ಗೌರಮ್ಮ ರವರಿಗೆ ಬರೆದುಕೊಟ್ಟಿರುತ್ತಾರೆ . ಆ ಸಮಯದಲ್ಲಿ ನಾನು ಮತ್ತು ನಿಂಗಮ್ಮ ಇಬ್ಬರು ಸಾಕ್ಷಿದಾರರು ಹಾಜರು ಇದ್ದೇವು . ಸದರಿ ನಿಪಿ-2 ಮೃತ್ಯು ಪತ್ರಕ್ಕೆ ಚೆನ್ನಮ್ಮ ರವರು ಹೆಬ್ಬಟ್ಟು ಗುರುತು ಹಾಕಿರುತ್ತಾರೆ . ಸದರಿ ನಿಪಿ-2 ರಲ್ಲಿರುವ ಹೆಬ್ಬಟ್ಟು ಗುರುತು ಚೆನ್ನಮ್ಮ ರವರದು ಆಗಿರುತ್ತದೆ . ಅದೇ ರೀತಿ ಸಾಕ್ಷಿದಾರರಾಗಿ ನಾನು ಮತ್ತು ನಿಂಗಮ್ಮ ರವರು ಸಹಿ ಮಾಡಿರುತ್ತೇವೆ . ಈಗ ನೊಡುೀತ್ತಿರುವ ನಿಪಿ-2 ರಲಿಲ್ಲರುವ 2 ನೇ ಸಾಕ್ಷಿದಾರರ ಸಹಿ ನನ್ನದು ಆಗಿದ್ದು , ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅದೇ ರೀತಿ 1 ನೇ ಸಾಕ್ಷಿದಾರರ ಸಹಿ ನಿಂಗಮ್ಮ ರವರ ಸಹಿ ಆಗಿರುತ್ತದೆ. ಸದರಿ ದಾಖಲೆಗೆ ಬಾಂಡ್ ರೈಟರ ಎಂ.ಎಸ್ . ಕುಲಕರ್ಣಿ ಮತ್ತು ವಕೀಲರಾದ ಎಂ.ಹೆಚ್ ಕುಲಕರ್ಣಿ ರವರು ಸಹಿ ಮಾಡಿರುತ್ತಾರೆ . ನೋಟರಿಯನ್ನು ಎಂ.ಎಸ್ ಕುಲಕರ್ಣಿ ವಕೀಲರ ಕಡೆ ಮಾಡಿರಸಿರುತ್ತೇವೆ .

**(ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಾಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

ದಿನಾಂಕಃ 04-04-2022 ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಗೆ ಅರ್ಜಿದಾರ ಪರ ಶ್ರೀ ಪಿ.ವಿ.ಕೆ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಈ ದಿನ ನ್ಯಾಯಾಲಯಕ್ಕೆ ನಾನು ಗ್ರಾಮ ಲೆಕ್ಕಾಧಿಕಾರಿ , ಮಾಕನೂರು ರವರು ಕೊಟ್ಟ ನನ್ನ ತಾಯಿ ಚೆನ್ನಮ್ಮ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ.-1 ಎಂದು ಗುರುತಿಸಲಾಯಿತು. ಅದೇ ರೀತಿ ದಿಃ 18-04-2012 ರಂದು ನನ್ನ ತಾಯಿ ಚೆನ್ನಮ್ಮ ರವರು ನನಗೆ ಮತ್ತು ನನ್ನ ಸಹೋದರಿ ಮಲ್ಲಮ್ಮ ರವರಿಗೆ ಬರೆದುಕೊಟ್ಟ ನೋಟರಾಜ್ಡ ಮೃತ್ಯು ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿಪಿ.-2 ಎಂದು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.**

ಈ ಮೇಲೆ ಹೇಳಿದ ಎಲ್ಲಾ ಕಾರಣದಿಂದ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಬೇಡಿದಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಾಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.